ಶ್ರೀ ಎಸ್. ಎಂ. ಗುರೆಡ್ಡಿ.—ಗ್ರಾಮೀಣ ಪ್ರದೇಶದ ಜನರು ಈ ಓರ್ಡಿನರಿ ಪೆನ್‌ಷನ್ ಉಪಯೋಗ ಪಡೆಯುತ್ತಿಲ್ಲ, ಇದಕ್ಕೆ ಮುಖ್ಯಕಾರಣ ಅಲ್ಲಿ ವಿಲೇವಾರಿ ಮಾಡುವಂತಹ ತಹಸೀಲ್ದಾರರು ಮತ್ತು ಡೆಪ್ಯೂಟಿ ಕಮೀಷನರು ನಿಗಾ ವಹಿಸುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಈಗ ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ಕೇವಲ ಪಟ್ಟಣವಾಸಿಗಳೇ ಇದರ ಲಾಭಪಡೆಯುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಪಟ್ಟಣದಲ್ಲಿ ವಾಸಿಸುವವರು ಈ ಉಪಯೋಗ ಪಡೆದುಕೊಂಡಿರುವುದು ಹೆಚ್ಚು ಅದು ನಿಜ. ಆದರೆ ಎಲ್ಲರೂ ಪಟ್ಟಣದಲ್ಲಿ ವಾಸಿಸುವವರು ಎಂದು ಹೇಳುವುದು ಸರಿಯಿಲ್ಲ. ಹಿಂದೆ ಒಂದು ಸಲ ಇಂತಹದ್ದೆ ಪ್ರಶ್ನೆ ಬಂದಾಗ ಹೇಳಿದೆ, ಸರ್ಕಾರದ ವತಿಯಿಂದ ಪಬ್ಲಿಸಿಟಿ ಎಷ್ಟು ಕೊಡಬೇಕೋ ಅಷ್ಟು ಕೊಡುತ್ತೇವೆ. ತಹಸೀಲ್ದಾರರು ಮತ್ತು ರೆವಿನ್ಯೂ ಅಧಿಕಾರಿಗಳು ಇದರ ಬಗ್ಗೆ ಸಾಕಾದಷ್ಟು ಪಬ್ಲಿಸಿಟಿ ಕೊಡಬೇಕೆಂದು ಹೇಳಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಅಧಿಕಾರೇತರರು ಪಬ್ಲಿಸಿ ಕೊಟ್ಟು ಅರ್ಜಿಗಳನ್ನು ಕಳುಹಿಸಿಕೊಟ್ಟ ಪಕ್ಷದಲ್ಲಿ ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆ.

Sri J. P. SARWESH.—Is it not a fact that in Gulbarga District many people have applied for such old age pension but unfortunately many have not received it. Will you kindly consider the applications which are still pending ?

Sri RAMAKRISHNA HEGDE.—Sir, the very way the question is put by the hon. member shows that it is only a presumption. Total number of applications received from Gulbarga District is 128, out of which 101 have been sanctioned. Two have been rejected and 25 applications are still pending.

ಶ್ರೀ ಎಸ್. ಎಸ್. ಅರಕೇರಿ.—ಈ ಪೆನ್‌ಷನ್ ಪಡೆಯುವುದಕ್ಕೆ ಏನೇನು ಅರ್ಹತೆಗಳಿರಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಒಂದು ಸರ್ಕಾರಿ ಆಜ್ಞೆಯನ್ನೇ ಟೇಬರ್ ಮೇಲೆ ಇಡುವುದಾಗಿ ಹೇಳಿದ್ದೇನೆ. ಅದರಲ್ಲಿ ವಿವರಗಳೆಲ್ಲಾ ಇದೆ.

Kaveri Emporium at New Delhi

30. Sri S. S. ARAKERI (Balloli).—

Will the Minister for Industries, Information and Publicity be pleased to state :—

(*a*) the total number of employees working in Kaveri Emporium in New Delhi (the number of ladies and gents may be given separately) ;

(*b*) whether any Kannada knowing employee is working in the said Kaveri Emporium, if not, the reasons for the same ;

(*c*) the total turn over of the sales at Kaveri Emporium since the last three years ?

Sri A. P. APPANNA (Deputy Minister for Industries).—

(*a*) (8).

Ladies–2.
Men–6.

(*b*) Yes.

(c)	Years.	Sales.
1	1965-66	2,98,961
2	1966-67	3,01,671
3	1967-68	4,28,651

ಶ್ರೀ ಎಸ್. ಎಸ್. ಅರಕೇರಿ.—ಇಲ್ಲಿ ಉತ್ತರದಲ್ಲಿ ದೆಹಲಿಯಲ್ಲಿರತಕ್ಕ ಕಾವೇರಿ ಎಂಪೋರಿಯಂನಲ್ಲಿ ಕನ್ನಡ ತಿಳಿದವರಿದ್ದಾರೆಂದು ಹೇಳಲಾಗಿದೆ. ಆದರೆ ನಾನು ಮೊನ್ನೆ ಆಗಸ್ಟಿನಲ್ಲಿ ಅಲ್ಲಿಗೆ ಹೋಗಿದ್ದಾಗ ಅಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರೂ ಇರಲಿಲ್ಲವಲ್ಲ? ಅವರನ್ನು ಅಲ್ಲಿ ಯಾವಾಗ ನೇಮಕ ಮಾಡಿಕೊಳ್ಳಲಾಯಿತು?

†ಶ್ರೀ ಎ. ಪಿ. ಅಪ್ಪಣ್ಣ.—ಆ 8 ಜನರಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರು ಇದ್ದಾರೆ. ತಾವು ಬಹುಶಃ ಅವರೊಡನೆ ಕನ್ನಡದಲ್ಲಿ ಮಾತನಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಆ ದೆಹಲಿಯಲ್ಲಿ ಅನೇಕ ರಾಜ್ಯಗಳವರು—ಗುಜರಾತಿನವರು ಹಾಗೂ ಮದ್ರಾಸಿನವರು—ಅಲ್ಲಿ ತಮ್ಮ ತಮ್ಮ ಎಂಪೋರಿಯಂಗಳಿಗೆ ತಮ್ಮ ರಾಜ್ಯದ ಹೆಸರನ್ನು ಇಟ್ಟುಕೊಂಡಿರುವಾಗ ನಮ್ಮ ಎಂಪೋರಿಯಂ ಒಂದನ್ನು ಮಾತ್ರ ಯಾರದೋ ಒತ್ತಾಯಕ್ಕೆ ಮಣಿದು ಕಾವೇರಿ ಎಂಪೋರಿಯಂ ಎಂದು ಇಟ್ಟಿರುವುದನ್ನು ಬದಲಾಯಿಸಿ, ಅದಕ್ಕೆ ಮೈಸೂರು ಅಥವಾ ಕರ್ನಾಟಕ ಎಂಪೋರಿಯಂ ಎಂದು ಹೆಸರಿಡುತ್ತೀರಾ?

ಶ್ರೀ ಎ. ಪಿ. ಅಪ್ಪಣ್ಣ.—ಕಾವೇರಿ ಮೈಸೂರನ್ನು ಉದ್ಧಾರ ಮಾಡತಕ್ಕ ಮಾತೆ. ಆದ್ದರಿಂದ ಅದನ್ನು ಬದಲಾಯಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಳೆದ 3 ವರ್ಷಗಳಿಂದ ಒಟ್ಟು ಎಷ್ಟು ರಾಫ ಬಂದಿದೆ?

ಶ್ರೀ ಎ. ಪಿ. ಅಪ್ಪಣ್ಣ.—ಖಚಿತವಾದ ಅಂಕಿಯನ್ನು ತಿಳಿಸುವುದಕ್ಕಾಗದಿದ್ದರೂ ಸಾಕಷ್ಟು ರಾಫದಲ್ಲಿ ಕೆಲಸ ಮಾಡುತ್ತಿದೆ ಎಂದು ಧಾರಾಳವಾಗಿ ಹೇಳಬಹುದು.

Loans of Failed Wells

58. Sri K. SANGANA GOWDA (Lingsugur).—

Will the Minister for Revenue be pleased to state :—

(*a*) whether the G.O. No. RDF 44 TSW 63, dated 25th March 1964 of Revenue Department, Government of Mysore, is in force ;

(*b*) whether the concessions metioned in the said G.O. are given to the borrowers of loan in case of failed wells in Raichur district ;

(*c*) whether there is any proposal to investigate such cases of failed wells and give benefit of the said G.O. to the farmers in Raichur district?

A.—Sri H. V. KOUJALGI (Minister for Revenue).—

(*a*) Yes.
(*b*) Yes.
(*c*) Yes.

ಶ್ರೀ ಕೆ. ಸಂಗನಗೌಡ.—ಆಜ್ಞೆ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದರಿಂದ ನಮ್ಮ ರಾಯಚೂರಿನ ಜಿಲ್ಲೆಯವರಿಗೆಷ್ಟು ಅನುಕೂಲ ದೊರೆತಿದೆ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿಂದ ಒಟ್ಟು 8 ಕೇಸುಗಳು ವಿಫಾಸರ್ವಾಗಿ ಬಂದಿದ್ದವು. ಅವುಗಳಿಗೆ ಎಲ್ಲಕ್ಕೂ ಅನುಕೂಲಮಾಡಿದೆ.